ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 114-121
©IIMRD, Mysuru
IIMRD JOURNALS
www.iimrd.com

# ಪ್ರಬಂಧ ಸಾಹಿತ್ಯದಲ್ಲಿ ಭಾವನಾತ್ಮಕ ಚಿಂತನೆಗಳು: ಒಂದು ಅವಲೋಕನ

ಡಾ. ಬಸವರಾಜ ಕುಂಬಾರ[1]

## ಪೀಠಿಕೆ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಬಂಧ ಸಾಹಿತ್ಯವು ನವೋದಯದ ಮತ್ತೊಂದು ಆಕರ್ಷಣೀಯ ಸಾಹಿತ್ಯವಾಗಿದ್ದು, ಹೊಸಗನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರವಾಗಿದೆ. ಕಥೆ, ಕಾದಂಬರಿ, ಚುಟುಕು, ಪ್ರವಾಸ ಸಾಹಿತ್ಯ, ಆತ್ಮಚರಿತ್ರೆ, ಅಂಕಣ, ಪತ್ರ ಸಾಹಿತ್ಯ ಮತ್ತು ಜೀವನ ಚರಿತ್ರೆಯಂತೆ ಪ್ರಬಂಧ ಸಾಹಿತ್ಯವು ಪ್ರಮುಖವಾದುದಾಗಿದೆ. ಗದ್ಯ ಸಾಹಿತ್ಯದಲ್ಲಿ ಆಕಾರಗೊಂಡ ಮತ್ತೊಂದು ಹೊಸ ಟಿಸಿಲು. ಇದಾಗಿದ್ದು ಕುವೆಂಪು, ಬೇಂದ್ರೆ, ಗೊರೂರು ರಾಮಸ್ವಾಮಿ ಅಯ್ಯಂಗಾರ, ನಾ ಕಸ್ತೂರಿ, ಶ್ರೀರಂಗ, ಎ.ಎನ್. ಮೂರ್ತಿರಾಯ, ಶಿವರಾಮ ಕಾರಂತ, ಹಾ.ಮಾ.ನಾಯಕ, ರಾ.ಯ.ಧಾರವಾಡಕರ, ತಿ.ನಂ.ಶ್ರೀ, ಮಳಲಿ ವಸಂತಕುಮಾರ, ಎಂ.ಎಸ್.ಶ್ರೀನಿವಾಸರಾಯ, ಪಂಜೆ ಮಂಗೇಶರಾಯ, ಮಧುರ ಚನ್ನ, ಎಂ.ಜಿ. ವೆಂಕಟೇಶಯ್ಯ, ರಂ. ಶ್ರೀ. ಮುಗಳಿ, ವಿನಾಯಕ ಗೋಕಾಕ, ವೀ. ಸೀತಾರಾಮಯ್ಯ, ರಾ.ಕು, ಅ.ರಾ. ಮಿತ್ರಾ, ದ.ಬಾ. ಕುಲಕರ್ಣಿ, ಎಂ.ಎಸ್. ಸುಂಕಾಪೂರ, ಸಿಂಪಿ ಲಿಂಗಣ್ಣ, ರಾಶಿ, ಎಂ. ರಾಮರಾವ್, ಎನ್.ಎಸ್. ಗದಗಕರ, ಪ್ರಭು ಶಂಕರ, ದೇ.ಜೆ.ಗೌ., ನಾಡಕರ್ಣಿ ಪಂಕಜಮ್ಮ, ಟಿ. ವಿನೋದಮ್ಮ, ವಿರೇಂದ್ರ ಸಿಂಪಿ, ಪಾಪು, ವಾಡಪ್ಪಿ, ಭುವನೇಶ್ವರಿ ಹೆಗಡೆ, ಪ್ರಲ್ಹಾದರಾವ್, ಎಚ್ಚೆಸ್ಕೆ, ಜ್ಯೋತ್ಸ್ನಾ ಕಾಮತ್, ವಿ.ವಿ.ಜೋಶಿ, ಸಿ.ಪಿ.ಕೆ, ಸದಾಶಿವ ಒಡೆಯರ, ಎನ್ಕೆ, ಹಿರೆಮಲ್ಲೂರು ಈಶ್ವರನ್, ಬಿ.ಜಿ.ಎಲ್.ಸ್ವಾಮಿ, ಬ.ಗಿ. ಯಲ್ಲಟ್ಟಿ, ಮಲ್ಲಿಕಾರ್ಜುನ ಹುಲಗಬಾಳ, ಕಾಡದೇವರ, ಸಿದ್ಧರಾಜ ಪೂಜಾರ, ಬಿ.ಎ.ಸನದಿ, ದಾಶರಥಿ ಹೀಗೆ ನವೋದಯದ ಅನೇಕ ಸಾಹಿತಿಗಳು ಪ್ರಬಂಧ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ.

ಪ್ರಬಂಧ ಸಾಹಿತ್ಯದಲ್ಲಿ ಸರಳತೆಯಿದೆ, ಮೃದು ಪರಾಮರ್ಶನವಿದೆ. ಅಭಿಮುಖೀಕರಣ ಶಕ್ತಿಯಿದೆ. ಮನಸ್ಸಿನ ಸ್ವಚ್ಛಂದ ಲಹರಿಯ ಪ್ರತೀಕತೆಯಿದೆ. ವಿಚಿತ್ರ ನಿರೂಪಣಾ ಶಕ್ತಿಯಿದೆ, ಭಾವನಾತ್ಮಕತೆಯಿದೆ. ನವನಾಗರಿಕತೆಯ ಪ್ರವಾಹವಿದೆ. ಮಂದಸ್ಮಿತ ಭಾವನೆಗಳಿರುತ್ತವೆ. ಆಂತರಿಕ ಜೀವನದ ಪ್ರತಿಬಿಂಬವಿದೆ. ಆಪ್ತನಿಷ್ಠತೆಯಿದೆ. ಅನೌಪಚಾರಿ ಕತೆಯಿದೆ. ವಿವೇಚನಾ ಮನೋಲಹರಿಯಿದೆ. ಮನೋಹರತೆಯಿದೆ. ಅರ್ಥಪೂರ್ಣತೆ ನಿಯಮ ಪಾಲನೆಯಿದೆ. ಸಂಕ್ಷಿಪ್ತಿಕರಣವಿದೆ. ಸ್ವಚ್ಛಂದ ಬಂಧವಿದೆ. ವ್ಯಕ್ತಿನಿಷ್ಠ ಆತ್ಮೀಯತೆಯಿದೆ. ಸರಸ ಸಾಹಿತ್ಯದ ತಿಳಿಹಾಸವು ಇಲ್ಲಿದೆ. ಸಾಮಾನ್ಯವಾಗಿ ಗದ್ಯ ಪ್ರಕಾರದ ಭಾವನಾತ್ಮಕತೆಯು ಇದೆ. ವಾದ ವೈಖರಿಯ ಕಲ್ಪನೆಯ ಚಮತ್ಕಾರವಿದೆ. ಜೀವನ ಪ್ರೀತಿಯೊಂದಿಗೆ ಜೀವನದ ವಿಮರ್ಶೆ ಪ್ರಬಂಧ ಸಾಹಿತ್ಯದಲ್ಲಿದೆ. ವಿಷಯ ವ್ಯಾಪ್ತಿಯ ಜೊತೆಗೆ ಪ್ರಾರಂಭ ಮತ್ತು ಮುಕ್ತಾಯವು ಇರುತ್ತದೆ. ಪ್ರಬಂಧ ಸಾಹಿತ್ಯವು ಮನಸ್ಥಿತಿಯನ್ನು ಬದಲಿಸುವ ನಡತೆಯನ್ನು ತಿದ್ದುವ,

[1] *ಕನ್ನಡ ಉಪನ್ಯಾಸಕರು, ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟ–587101.*

ಹೃದಯವನ್ನರಳಿಸುವ, ಬುದ್ಧಿಯನ್ನು ಪ್ರಚೋದಿಸುವ, ಭಾವನೆಗಳನ್ನು ಹರಿತಗೊಳಿಸುವ, ಅನುಭವದ ಆಳವನ್ನು ಹೆಕ್ಕಿ ತೆಗೆಯುವ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ.

ಮೂಲ ಪ್ರಬಂಧದ ಗುಣ ಲಕ್ಷಣವನ್ನು ಗಮನಿಸಿದಂತೆ ಭಾವನಾತ್ಮಕತೆಯ ಪ್ರಮುಖ ಲಕ್ಷಣಗಳಲ್ಲೊಂದು. ಪ್ರಪಂಚದ ಯಾವುದೆ ವಿಷಯ ಪ್ರಬಂಧದ ವಸ್ತುವಾಗಬಲ್ಲುದು. ಕಥನಾತ್ಮಕವಾಗಿರಬಹುದು, ವಿವರಣಾತ್ಮಕವಾಗಿರಬಹುದು ಅಥವಾ ಆತ್ಮಕಥನ ರೂಪವಾಗಿರಬಹುದು. ಅದು ವಿಮರ್ಶಾತ್ಮಕವೂ ಆಗಿರಬಹುದು. ಕಲ್ಪನೆಯೊಂದಿಗೆ ಭಾವನಾತ್ಮಕತೆಯು ಹೊಂದಿರುವುದು. ಗಾತ್ರದಲ್ಲಿ ಚಿಕ್ಕದಾಗಿದ್ದು ಅಲ್ಲಿ ಭಾವನೆಯ ನರ್ತನವಿವುದು. ರಸಿಕ ನಿರೂಪಣೆಯಲ್ಲಿ ಸರಳ ರಸವತ್ತಾದ ಶೈಲಿಯಲ್ಲಿಯೂ ಭಾವನಾತ್ಮಕತೆಯು ಅಲ್ಲಿ ಕಾಣುವುದು. ನೇರವಾದ ನೀತಿ ಭೋದನೆಯ ಜೊತೆ ಅನುಭವದ ಭಾವ ಲೇಪನವು ಅಲ್ಲಿರುವುದು. ಮಾನವ ಸಮಾಜದ ಓರೆ ಕೋರೆಯಲ್ಲಿ ಭಾವನಾತ್ಮಕ ಲೇಪನ ಕಾಣುವುದು. ಭಾಷೆಯು ಸಂಪೂರ್ಣ ದೇಶಿಯತೆಯಿಂದ ಕೂಡಿದ್ದು ಭಾವನೆಯೇ ಪ್ರಧಾನವಾದದ್ದು. ಉದ್ಧರಣಾತ್ಮಕ ಉದಾಹರಣೆಯನ್ನು ಬರೆಯುವಲ್ಲಿ ಭಾವ ಸಿಂಚನತೆ ಕಾಣುವುದು. ಲಲಿತ ಪ್ರಬಂಧಗಳಲ್ಲಿ ಬಹುತೇಕ ಜೀವನಾನುಭವ ಇರುವುದರಿಂದ ಲಾಲಿತ್ಯದ ಭಾವನಾತ್ಮಕತೆಯಲ್ಲಿ ಕಾಣುವುದು. ಸ್ಥಳೀಯತೆ ಪ್ರಬಂಧದಲ್ಲಿ ಸ್ವಕೀಯತೆ ಇರುವದರಿಂದ ಜನರ ನಾಡಿ ಮಿಡಿತದ ಭಾವನಾತ್ಮಕತೆಯನ್ನು ಪ್ರಬಂಧಗಳಲ್ಲಿ ಕಾಣುತ್ತೇವೆ.

ಭಾವನೆಯನ್ನು ಕುರಿತು ಗಮನಿಸುವುದಾದರೆ ಮನಸ್ಸಿನ ಒಲವು, ಓಟ, ಆಕಾಂಕ್ಷೆಗಳನ್ನು ನೇಯುವ ಒಂದು ಕ್ರಮವೇ ಆಗಿದೆ. ಲೋಕಾಭಿರಾಮವಾಗಿ ಕುಳಿತು ವಿಷಯವನ್ನು ಹಲವು ಮಗ್ಗಲುಗಳಿಂದ ಕಂಡು ಅದನ್ನು ದಶದಿಕ್ಕಿಗೆ ವಿಸ್ತರಿಸುತ್ತಾ, ನೇರವಾಗಿ ಮತ್ತೊಮ್ಮೆ ವ್ಯಂಗ್ಯವಾಗಿ, ಮಗದೊಮ್ಮೆ ಕುಚೇಷ್ಟೆಯಿಂದ ವಿಷಯವನ್ನು ವಿಶ್ಲೇಷಿಸುವ ರೀತಿಯಲ್ಲಿ ವ್ಯಾಖ್ಯಾನಿಸುತ್ತಾ ಹೋಗುವರು. ಲೋಕದ ಅನುಭವವೇ ಇಲ್ಲಿ ಮುಖ್ಯವಾಗಿ ಕಾಣುವುದು. ವಿವಿಧ ವಿಭಾಗಗಳ ಅಧ್ಯಯನದ ಭಾವನೆಗಳನ್ನು ಇಲ್ಲಿ ಹೆಣೆಯುವರು. ರಸಿಕ ಮನಸ್ಸಿನ ಓಟಕ್ಕೆ ಅನುಗುಣವಾಗಿ ತಿರುವುಗಳನ್ನು ನೀಡುತ್ತಾ, ಚಮತ್ಕಾರಗಳನ್ನು ಚಿತ್ರಿಸುತ್ತಾ ಭಾವನೆಯ ಬೆಳೆಯನ್ನು ಬೆಳೆಯುವ ಮನೋಸ್ಥಿತಿಯನ್ನು ಚಿತ್ರಿಸುತ್ತಾ ಹೋಗುವರು. ಪ್ರಬಂಧಕಾರರು ಬಹುತೇಕ ಪ್ರಬಂಧಗಳಲ್ಲಿ ಕಲ್ಪನಾವಿಲಾಸದೊಂದಿಗೆ ಭಾವನಾವಿಲಾಸವನ್ನು, ಮನೋವಿಲಾಸಗಳನ್ನು ಚಿತ್ರಿಸುತ್ತಾ ಹೋಗುವರು. ಈ ರೀತಿಯಾಗಿ ಬೆಳೆದು ಪ್ರಬಂಧ ಸಾಹಿತ್ಯವನ್ನು ತಲೆಮಾರುಗಳ ಹಿನ್ನಲೆಯಲ್ಲಿ ಮೂರು ಘಟ್ಟಗಳಾಗಿ ವಿಂಗಡಿಸಲಾಗಿದೆ.

**ಮೊದಲನೇ ಘಟ್ಟ**

ಪ್ರಬಂಧ ಸಾಹಿತ್ಯದ ಪಿತಾಮಹರೆನಿಸಿಕೊಂಡ ಎ.ಎನ್. ಮೂರ್ತಿರಾಯರ ಪ್ರಬಂಧಗಳನ್ನು ಗಮನಿಸಿದರೆ ಸುಸಂಸ್ಕೃತ ವ್ಯಕ್ತಿಯೊಂದಿಗೆ ವ್ಯವಹಾರ ನಡೆಸಿದಂತೆ ಮಾನವತಾವಾದಿಯ ಒಡನಾಟವನ್ನು ಬೆಳೆಸಿಕೊಂಡಂತೆ ಅನುಭವವಾಗುವುದು. 'ಅಲೆಯುವ ಮನಗಳು', 'ಹಗಲು ಗನಸುಗಳು', 'ಮಿನುಗು ಮಿಂಚು', ಈ ಮೂರ ಪ್ರಬಂಧ ಸಂಕಲನಗಳಲ್ಲಿ ಬದುಕಿನ ಭಾವನೆಯ ವಿವಿಧ ಮಜಲುಗಳ ಭಾವನಾತ್ಮಕ ಚಿಂತನೆಗಳಿವೆ. ಕಲಾತ್ಮಕ ಆತ್ಮ ವೃತ್ತಾಂತಗಳಿವೆ. ಅನುಭವದ ಸೂಕ್ಷ್ಮತೆಗಳಿವೆ. ಆಲೋಚನಾ ಸಾಮರ್ಥ್ಯವಿಲ್ಲಿದೆ, ವಿಶ್ಲೇಷಣಾತ್ಮಕತೆಯಿದೆ. ಈ ಪ್ರಬಂಧಗಳು ಕನ್ನಡ ಸಾಹಿತ್ಯದಲ್ಲಿ ಅಚ್ಚಳಿಯದ ಸ್ಥಾನ

ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
IIMRD JOURNALS

ಪಡೆದದ್ದು ಭಾವಪರವಾದ ಭಾವನಾತ್ಮಕವಾದ ವಿಚಾರ ಸರಣಿಯಿದೆ ಎಂಬುದರಲ್ಲಿ ಎರಡು ಮಾತಿಲ್ಲ. ವಿ.ಸೀತಾರಾಮಯ್ಯನವರ ಪ್ರಬಂಧಗಳು ಪರಿಪೂರ್ಣ ರಸಿಕತೆಯಿಂದ ಕೂಡಿವೆ. 'ಬೆಳದಿಂಗಳು', 'ಸೀಕರಣೆ' ಪ್ರಬಂಧಗಳಲ್ಲಿ ಗಮನಾರ್ಹ ಸೌಂದರ್ಯೋಪಾಸನೆ ಇದೆ. ಆ ಸೌಂದರ್ಯೋಪಾಸನೆಯಲ್ಲಿ ಭಾವನಾತ್ಮಕ ಲಹರಿಯ ಕಲಾಭಿಜ್ಞತೆ, ರಸಿಕತನ ಹಾಗೂ ಸೊಗಸುಗಾರಿಕೆಯ ಕಾಣುವುದು. ವ್ಯಾಪಕ ಓದು ಇಲ್ಲಿ ಕಾಣುವುದು. ಜೀವನಾನುಭವದಲ್ಲಿ ಭಾವನಾತ್ಮಕತೆ ಇಲ್ಲದಿದ್ದರೆ ಹೇಗೆ ಎಂಬ ಅಂಶವನ್ನು ಗಮನಿಸಬಹುದು. 'ಮೈಸೂರಿನ ರುಮಾಲಿ' ಪ್ರಬಂಧದಲ್ಲಿ ವಿಸ್ತಾರವಾದ ಜೀವನಪರ ಚಿಂತನೆಗಳು ಇಲ್ಲಿ ಕಾಣುತ್ತವೆ. ಪ್ರಬಂಧಗಳಲ್ಲಿ ಭಾವನಾತ್ಮಕ ಮನಸ್ಸಿನ ಓಟಗಳು, ಆಸೆ ಆಕಾಂಕ್ಷೆಗಳು ವ್ಯಕ್ತವಾಗುವವು.

ಪು.ತಿ. ನರಸಿಂಹಾಚಾರ್ಯರು ಹಲವಾರು ಪ್ರಬಂಧ ಸಂಕಲನಗಳನ್ನು ಹೊರ ತಂದಿದ್ದಾರೆ. 'ಈಚಲು ಮರದ ಕೆಳಗೆ', 'ರಾಮಾಚಾರಿಗಯ ನೆನಪು', 'ರಥಸಪ್ತಮಿ ಮತ್ತು ಇತರ ಚಿತ್ರಗಳು', 'ಧೇನುಕ ಪುರಾಣ', ದೀಪರೇಖೆಗಳು ಪ್ರಮುಖ ಪ್ರಬಂಧಗಳು. ಪು.ತಿ.ನರವರು ಹಳ್ಳಿಯ ಭಾವನಾತ್ಮಕ ಚಿಂತನೆಯು ಕಾಣುವ ಕಲ್ಪಕತೆ, ಸರಳ ಭಾಷೆಯ ಬಳಕೆ ವೈಶಿಷ್ಟ್ಯಪೂರ್ಣವಾಗಿದೆ. ಪು.ತಿ.ನರವರ ಭಾವನಾತ್ಮಕತೆ ಇತಿಹಾಸ, ವಿಜ್ಞಾನ ಹಾಗೂ ಮಾನವಿಕ ಶಾಸ್ತ್ರಗಳನ್ನು ಸೂಕ್ಷ್ಮವಾಗಿ ಸರ್ವೇಂದ್ರಿಯ ಸಹಕಾರದಿಂದ ವಿಶ್ಲೇಷಣೆ ಮಾಡಿದ್ದಾರೆ. ಜಗತ್ತಿನ ಸತ್ಯಮಿಥ್ಯಗಳು, ಆಧ್ಯಾತ್ಮಿಕ ಜಿಜ್ಞಾಸೆ, ನಿರೀಕ್ಷಣಾಶಕ್ತಿ, ಚಿಂತನಶೀಲತೆ, ಅಸಮಾನ್ಯತೆ ಗುಣಾವಗುಣಗಳ ವಾಸ್ತವ ಚಿತ್ರಣಗಳು ಚಿತ್ರಿತಗೊಂಡಿವೆ. ಗೂರೂರು ರಾಮಸ್ವಾಮಿ ಅಯ್ಯಂಗಾರರ ಪ್ರಬಂಧಗಳು ಹಾಸ್ಯ ಪ್ರಧಾನವಾಗಿ ಹರಟೆಗಳತ್ತ ತಿರಗುತ್ತವೆ. ಕೆಲವೊಂದು ಪ್ರಬಂಧಗಳು ಹಾಸ್ಯಕಥೆಗಳಂತೆ ಭಾಷವಾಗುತ್ತವೆ. 'ನಮ್ಮೂರ ರಸಿಕರು', 'ಹಳ್ಳಿಯ ಚಿತ್ರಗಳು', 'ಹಳೆಯ ಪಳೆಯ ಮುಖಗಳು' ಪ್ರಬಂಧ ಸಂಕಲನಗಳಲ್ಲಿ ಹಳ್ಳಿ ಜೀವನದ ವರ್ಣನಾತ್ಮಕ ಕಲ್ಪನೆಯಲ್ಲಿ ಭಾವನಾಲಹರಿಯು ಎದ್ದು ಕಾಣುವುದು. ಹಳ್ಳಿಯ ಜನಮಾನಸದ ಸಾಮಾನ್ಯ ಜನರ, ಶಾನುಭೋಗರ, ಕ್ಷೌರಿಕರ, ಆಳುಕಾಳುಗಳ, ಅಂಚೆ ಅಣ್ಣಂದಿರ ವ್ಯಕ್ತಿ ಚಿತ್ರಗಳ ಹಾಸ್ಯಲೇಪಿತ ಶೈಲಿಯಲ್ಲಿಯು ಭಾವನಾತ್ಮಕತೆ ಎದ್ದು ಕಾಣುವುದು. ವ್ಯಕ್ತಿಯ ನಡತೆ, ಮುಖಭಾವ, ಆಕಾರ ವಿಲಕ್ಷಣತೆ, ಸರಳ ನಿರಾಡಂಭರತೆಯ ಶೈಲಿಯ ಬಳಕೆಯಲ್ಲಿ ಸಾಮಾನ್ಯ ಜನರ ಭಾವನಾತ್ಮಕ ಚಿಂತನೆಯಲ್ಲಿ ಕಾಣುವುದು. ಕನ್ನಡ ಸಂಸ್ಕೃತಿಯ ದರ್ಶನದ ಗುಣಗಳಿವೆ. 'ತಲೆಮಾರಿನ ಹಿಂದೆ', 'ದಿಟ್ಟಿಸಿ ನೋಡಿದರೆ', 'ಅಸ್ತವ್ಯಸ್ತ' ಹಾಗೂ 'ಸ್ವರ್ಗದೋಲೆಗಳು' ಮೂಲಕ ಭಾವನಾತ್ಮಕ ಸಾಂಸ್ಕೃತಿಕ ನೆಲೆಗಟ್ಟನ್ನು ವಿಸ್ತರಿಸಿದ್ದಾರೆ.

ಉತ್ತರ ಕರ್ನಾಟಕದ ಸಿಂಪಿ ಲಿಂಗಣ್ಣನವರು ಕನ್ನಡ ನಾಡಿನ ಸಾಹಿತ್ಯ, ಸಂಸ್ಕೃತಿ, ಭಾರತೀಯ ಇತಿಹಾಸ, ಜನಪದ ಸಾಹಿತ್ಯ, ಕಲೆ, ಆದ್ಯಾತ್ಮಿಕ ವಿಷಯ ವಸ್ತುವನ್ನು ಒಳಗೊಂಡ ಪ್ರಬಂಧಗಳಲ್ಲಿ ಭಾವನಾತ್ಮಕ ಚಿಂತನೆ ಅಡಗಿದೆ. ಸಿಂಪಿ ಲಿಂಗಣ್ಣನವರ ಪ್ರಬಂಧಗಳಲ್ಲಿ ಮನಕ್ಕೆ ಭಾವನಾತ್ಮಕ ಚಿಂತನೆಯನ್ನೊಳಗೊಂಡ 'ನೂರು ಗಡಿಗೆ ಒಂದು ಬಡಿಗೆ' ಅನುಭವ ಚಿಂತನೆ ಹೆಣದಿದ್ದಾರೆ. ಕಲಿಕೆಯ ವಿಚಾರದಲ್ಲಿ ಹಿಗ್ಗಬಲ್ಲುದು. ತಮ್ಮ ಸುತ್ತಲಿನ ಪರಿಸರದ ಸಾಮಾನ್ಯ ಸಂಗತಿಯ ನಿದರ್ಶನ ಕೊಡುವ ಜಾನಪದೀಯ ಅಂಶಗಳು ಭಾವನೆಯ ಬಿಂಬವನ್ನು ಪ್ರದರ್ಶಿಸುವುದೆ ಆಗಿದೆ ಎಂಬಂಶ ಮುಖ್ಯವಾದದ್ದು.

ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಪ್ರಬಂಧ ಸಂಕಲನವು ಇಡೀ ಮಲೆನಾಡಿನ ಕುಟುಂಬಗಳ, ಭಾವನಾ ಲಹರಿಯನ್ನು ಹಾಡುತ್ತಾ ಹೋಗುವುದು. ಮಲೆನಾಡಿನ ಕಲ್ಪನಾ ವಿಲಾಸ


VOLUME 2, ISSUES 1, JUL-AUG 2020 ISSN: 2582-2284, 114-121

ಭಾವನಾತ್ಮಕವಾಗಿ ಸುರಳಿಯನ್ನು ಬಿಚ್ಚುತ್ತಾ ಹೋಗುವುದು. ಮಲೆನಾಡಿನ ವೈವಿಧ್ಯಮಯ ಜೀವನ ದರ್ಶನವನ್ನು ವರ್ಣಿಸುವುದು. ಮಲೆನಾಡಿನ ಪ್ರಕೃತಿ ಜೀವನ, ಪ್ರಾಣಿ ಜೀವನ, ಜನ ಜೀವನವನ್ನು ಮಲೆನಾಡಿನ ಚಿತ್ರಗಳಲ್ಲಿ ಭಾವನಾಪರ ಚಿಂತನೆಯು ವ್ಯಕ್ತವಾಗುತ್ತಲೆ ಹೋಗುವುದು. ಹಳ್ಳಿಯಲ್ಲಿರುವ ವ್ಯಕ್ತಿ ಚಿತ್ರಣ, ಬೇಟೆಯ ಸಂಸ್ಕೃತಿ, ಪ್ರಕೃತಿಯ ವರ್ಣನೆಯಲ್ಲವು ಜೀವಪರ, ಭಾವಪರವಾದ ಚಿಂತನೆಯನ್ನು ಒದಗಿಸುವುದು. ಹರಟೆಯು ಗುಣಲಕ್ಷಣವು ಇರುವುದು. ಹರಟೆಯಲ್ಲಿ ಭಾವನಾತ್ಮಕ ಚಿಂತನೆಗಳು ರಸವತ್ತಾಗಿ ಮೂಡಿ ಬಂದಿರುವ ಸಾಕಷ್ಟು ನಿದರ್ಶನಗಳು ಎದ್ದು ಕಾಣುತ್ತವೆ.

ಪ್ರಬಂಧ ಸಾಹಿತ್ಯಕ್ಕೆ ಬಿಗುವಿನ ಭಾವ ಬಂಧ ದಯಪಾಲಿಸಿದ ಸಾಹಿತಿ ತಿ.ನಂ. ಶ್ರೀಯವರು. ಅವರ 'ನಂಟರು' ಕೃತಿಯಲ್ಲಿ ಕೌಟುಂಬಿಕ ಜೀವನದ ಸಂಬಂಧಗಳ ಸಾಮರಸ್ಯತೆಯನ್ನು ಕಾಣುತ್ತೇವೆ. ಅವರ ಕಾದಂಬರಿಯಲ್ಲಿ ಅಚ್ಚುಕಟ್ಟುತನ, ನಯಗಾರಿಕೆ, ಸಂಕ್ಷಿಪ್ತತೆ, ಭಾವನಾತ್ಮಕ ಚಿಂತನೆಯನ್ನು ಬೆಳೆಸುವ ರೀತಿ, ಜನರ ನೋವು ನಲಿವು ಆತ್ಮೀಯ ಶೈಲಿಯು ಅವರ ಪ್ರಬಂಧಗಳಲ್ಲಿ ಸರ್ವೆ ಸಾಮಾನ್ಯ. ಎನ್. ಪ್ರಹ್ಲಾದರಾಯರ 'ಮಧುವತೆ', 'ಮುತ್ತಿನ ಹಾರ'ಗಳಲ್ಲಿ ಸುಸಂಸ್ಕೃತ ಮನಸ್ಸುಗಳ ನೇರವಾದ ಆಲೋಚನಾ ಲಹರಿಯಿದೆ. ಕೌಟುಂಬಿಕ ಜೀವನದ ಸ್ವಾರಸ್ಯವಿದೆ. 'ಹಕ್ಕಿಹಾರುವ ಚಿತ್ರಣ' ಕಾವ್ಯಮಯ ಭಾವಪ್ರಧಾನತೆಯು ಇಲ್ಲಿ ವರ್ಣಿಸಲಸದಳವಾಗಿದೆ. ದ.ಬಾ. ಕುಲಕರ್ಣಿಯವರ ವಿ.ಕೃ. ಗೋಕಾಕರ, ರಂ.ಶ್ರೀ. ಮುಗಳಿಯವರ, ದ.ರಾ. ಬೇಂದ್ರೆಯವರ ಪ್ರಬಂಧಗಳಲ್ಲಿ ಸಂಕಥನ, ಲಾಲಿತ್ಯ, ಸೌಂದರ್ಯ ಮಿಮಾಂಸೆ, ಜೀವನ ಪಾಠ ವೃತ್ತಾಂಗಳು, ಆತ್ಮೀಯ ಸಲ್ಲಾಪ, ವಿಡಂಬನೆ, ವ್ಯಂಗ್ಯ, ಮೊನಚಾದ ಹಾಸ್ಯ ಪ್ರಸಂಗಗಳು ಭಾವನಾತ್ಮಕತೆಯ ಚಿಂತನಾ ಲಹರಿಯಲ್ಲಿ ತೇಲಿಸುತ್ತಾ ಹೋಗುವವು. ಭಾವನಾತ್ಮಕತೆಯು ಜೀವನದೊಂದಿಗೆ ಬಂಧ ಬೆಸೆಯುವುದು ಬರವಣಿಗೆಯ ನಂಟು. ನಾ. ಕಸ್ತೂರಿಯವರ 'ಉಪಾಯ ವೇದಾಂತ', 'ನನ್ನ ಬೆನ್ನು' ಪ್ರಬಂಧಗಳಲ್ಲಿಯೂ ಮೇಲಿನ ಎಲ್ಲಾ ಪ್ರಸಂಗಗಳು ಹಾಸು ಹೊಕ್ಕಾಗಿವೆ. ನಾಟಕಕಾರರಾದ ಶ್ರೀರಂಗರು, ಕಾದಂಬರಿಕಾರರಾದ ಕಾರಂತರು ಕೆಲವೊಂದು ಚಿಂತನಾತ್ಮಕವಾದ ವೈಚಾರಿಕ ಲೇಖನ ರಚಿಸಿದ್ದು ಭಾವಪರ ಚಿಂತನೆಯಲ್ಲಿವೆ. ಮೂರ್ತ ಭಂಜಕತನವು ಕಾಣುವುದು. ರೀತಿ ನೀತಿಗಳ ಕಟುಟೀಕೆ ಮುಖ್ಯವಾಗಿ ಚರ್ಚಿತ. ಬೀಚಿಯವರು ಸಾಹಿತ್ಯಿಕ ಪ್ರಬಂಧ ಹಾಸ್ಯದ ಮಗ್ಗಲು ಪರಿಚಯದೊಂದಿಗೆ ಜೀವನಾನುಭವವನ್ನು ಬಗೆದು ನೋಡಿದ ರೀತಿ ಅನನ್ಯವಾದದ್ದು. ಅವರ ಪ್ರಬಂಧಗಳಾದ 'ಮಾತ್ರೆಗಳು', 'ಹುಚ್ಚು ಮರಳು', 'ಗಾಳಿ ಮಾತು', ಮುಂತಾದ ಸಂಕಲನಗಳಲ್ಲಿ ಹರಟೆಯ ಮುಖಾಂತರ ಭಾವನಾತ್ಮಕ ಚಿಂತನೆಗಳು ನುಸುಳಿದ್ದು ಕಾಣುವುದು.

**ಎರಡನೇ ಘಟ್ಟ**

ಎರಡನೆಯ ಕಾಲಘಟ್ಟದಲ್ಲಿ ಹಲವಾರು ಪ್ರಬಂಧಕಾರರು ಆಗಿ ಹೋಗಿದ್ದಾರೆ. ರಾ.ಕು. ಅವರ 'ಗಾಳಿಪಟ', ದೇವಕನ್ಯೆ' ಪ್ರಬಂಧಗಳನ್ನು ಗಮನಿಸಲಾಗಿ 'ಗಾಳಿಪಟ' ಅತ್ಯಂತ ಮಹತ್ವದ್ದು. ಪ್ರಬಂಧದ ಎಲ್ಲಾ ಸಾಧ್ಯತೆಗಳನ್ನು ಸೂರೆಗೊಂಡವರು. ವ್ಯಂಗ್ಯ, ತರ್ಕ, ಜಿಜ್ಞಾಸೆ ಹಳಗನ್ನಡ ಸಾಹಿತ್ಯದ ಸಾಲುಗಳ ಉಪಮೆಯು, ಸೂಕ್ತಿಯು, ವಿಚಾರವು ಸಮ್ಮೋಹಕ ವಿಚಾರ ಸರಣಿಯು ಅಲ್ಲಿದೆ. ವಕ್ರೋಕ್ತಿಯ ವಿಲಾಸಗಳಿಗೆ ಕೊಂಕು ಕಟಕಿಗಳಿಗೆ, ಚಮತ್ಕಾರ ಕಲ್ಪನಾ ಲೋಕಗಳಾದರೂ ಅವರ 'ಗಾಳಿಪಟ' ಓದಲೇಬೇಕು. ಮನುಷ್ಯನ ಭಾವನಾ ಪ್ರಪಂಚವನ್ನು ಓದಿ ಆಸ್ವಾದಿಸಲೇಬೇಕು. ಅವರು ಆ ಪ್ರಬಂಧಗಳಲ್ಲಿ

ಹರಿಬಿಟ್ಟ ಸಂದೇಹಗಳಿಗೆ ಅವರೆ ಕೊಟ್ಟ ಉತ್ತರಗಳು ಮನನೀಯವಾಗಿವೆ. ಇವರ ತರುವಾಯದ ನಂತರ ಬರುವ ರಾ.ಯ.ಧಾರವಾಡಕರ ಪ್ರಬಂಧಗಳಲ್ಲಿ ವಿನೋದದೃಷ್ಟಿ, ಚಿಂತನಪರತೆ, ಪಾಂಡಿತ್ಯ ಓತ ಪ್ರೋತವಾದ ಧಾರವಾಡದ ದೇಶಿಯ ಚಿಂತನಶೀಲ ಭಾಷೆ ಬಳಕೆಯಾಗಿದೆ. 'ತೊರಿದ ಚಿಂತನಗಳು' 'ನವಿಲುಗರಿ', 'ಸೂರ್ಯಪಾನ' ಭಾವನಾತ್ಮಕ ಸರಸ, ವಿಡಂಬನ ಶೈಲಿ, ಭಾಷಾ ವೈಶಿಷ್ಟ್ಯ ಬಳಕೆ, ರಮ್ಯತೆ, ಸುಸಂಸ್ಕೃತಿ ಚಿಂತನಾಲಹರಿ, ಭಾವಪರವಶತೆಯು ಎದ್ದು ಕಾಣುವುದು. ಅನಂತರ ಕಾಲದ ಪ್ರಮುಖ ಲೇಖಕರಾದ ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ 'ಸುರಹೊನ್ನೆ', 'ಕಳ್ಳ ಹೊಕ್ಕ ಮನೆ', 'ಜೇಡರ ಬಲೆ', 'ಚಂದ್ರಕಾಂತೆ', 'ಮೇಘಲಹರಿ', 'ಹವಳದ ಸರ' ಪ್ರಬಂಧ ಸಂಕಲನಗಳಲ್ಲಿ ಅದರಲೂ 'ನಗು' ಪ್ರಬಂಧವು ತೃಪ್ತಭಾವನೆಯ ನಗುವಿದೆ. ನಗು ಆನಂದ ಕುರುಹು, ಒಳಮುಗುಳು, ಚುಚ್ಚುನಗು, ಮೆಚ್ಚುನಗು ಭಾವನಾತ್ಮಕ ಚಿಂತನೆಯ ಚಹರೆಗಳೆ ಆಗಿವೆ.

ಈ ಕಾಲಘಟ್ಟದಲ್ಲಿ ಎನ್.ಕೆ. ಕುಲಕರ್ಣಿಯವರ ಹಲವಾರು ಪ್ರಬಂಧ ಸಂಕಲನಗಳು ಬಂದಿವೆ. 'ಮೋಡಕಾ ಬಜಾರ್', 'ಮುಂಗಾಲ ಪುಟಿಗೆ', 'ಎನ್ಕೆ ಪ್ರಬಂಧಗಳು' ಪ್ರಮುಖವಾದವು. ಅವರ ಪ್ರಬಂಧಗಳಲ್ಲಿ ರಸಿಕತೆಯಿದೆ. ಲೋಕಜ್ಞಾನವಿದೆ. ಜೀವನಾನುಭವವಿದೆ. ವಿಚಿತ್ರ ಸ್ವಭಾವಗಳ ವಿನೋದಪೂರ್ಣ ವಿವರಣೆಯಿದೆ. ನಿವೃತ್ತಿ ಜೀವನದ ಭಾವಬಿಂಬಗಳಿವೆ. ಕಸದಲ್ಲಿ ರಸ ತೆಗೆಯುವ ರೀತಿ ಇಲ್ಲಿದೆ. ಆತ್ಮೀಯವಾದ ಮಾತಿನ ದಾಟಿಯಿದೆ. ಕಟಕಿ, ವ್ಯಂಗ್ಯ, ವಿಡಂಬನಗಳಿಂದ ಅವರ ಬರಹ ತುಂಬಿವೆ. ಹಾಸ್ಯದಲ್ಲಿ ನೋವಿನ ಛಾಯೆಯಿದೆ. ಇದೇ ಕಾಲದ ಅ.ರಾ. ಮಿತ್ರಾವರು ಪ್ರಮುಖ ಪ್ರಬಂಧಕಾರರು. 'ಬಾಲ್ಕನಿಯ ಬಂಧುಗಳು', 'ಯಾರೋ ಬಂದಿದ್ದರು', 'ಸಂಕಲ್ಪಗಳು', 'ಮಿತ್ರ ಪ್ರಬಂಧ' ಪ್ರಮುಖ ಪ್ರಬಂಧಗಳಾಗಿವೆ. ಮಾನವ ಸ್ವಭಾವದ ಓರೆ ಕೋರೆಗಳನ್ನು ವ್ಯಕ್ತಪಡಿಸುವ ರೀತಿ ಅನನ್ಯವಾಗಿದೆ. ಭಾಷೆ ಹಾಗೂ ಭಾವನಾ ವೈಶಿಷ್ಟ್ಯವು ಇಲ್ಲಿದೆ. ಅವರ ಪ್ರಬಂಧಗಳು ಭಾವಗೀತೆಯ ಗುಣಗಳನ್ನು ಒಳಗೊಂಡಿವೆ. ನೂತನ ಪ್ರಯೋಗ ಮತ್ತು ಸರಸ ಶೈಲಿಯ ಭಾವನಾತ್ಮಕ ಬರಹಗಳೇ ಅ.ರಾ. ಮಿತ್ರಾ ಅವರ ವೈಶಿಷ್ಟ್ಯವಾಗಿದೆ. ಇದೇ ಸಂದರ್ಭದಲ್ಲಿ ಬರುವ ಬಿ.ಆರ್. ವಾಡಪ್ಪಿಯವರು 'ಗುಬ್ಬಿ ಗೂಡು' ವಿಶಿಷ್ಟ ಲಲಿತ ಪ್ರಬಂಧ ಸಂಕಲನವಾಗಿದೆ. ಸುಸಂಸ್ಕೃತ ಮನಸ್ಸುಗಳ ಅಲೆದಾಟ ಕಂಡುಬರುವುದು. ಸುಸಂಸ್ಕೃತಿಯಲ್ಲಿ ಭಾವನಾಲಹರಿ, ಭಾವನಾತ್ಮಕತೆಯು ಸ್ಪಷ್ಟವಾಗಿ ಗೋಚರಿಸುವುದು. ಅದೇ ದಾರಿಯಲ್ಲಿ ಗದಗಕರ ಎನ್.ಎಸ್‌ರವರು ಬರುವದನ್ನು ಗಮನಿಸಬಹುದಾಗಿದೆ. ಲಾಂಗೂಲಾಚಾರ್ಯರ ಚುರುಕುಮತಿಯ ಹರಟೆಗಳಿಗೆ ಪ್ರಸಿದ್ಧಿ ಪಡೆದರು. ಹರಟೆಯ ಮುಖಾಂತರ ಸಾಹಿತ್ಯ ಸೃಜಿಸಿದರು. ಲಾಂಗೂಲಾಚಾರ್ಯರ ಪ್ರಬಂಧಗಳು ರಾಜಕೀಯದಿಂದ ರಾಮಾಯಣದವರೆಗೂ ಗೌಳಿಗಳಿಂದ ಗಣೇಶನವರೆಗೂ ವ್ಯಂಗ್ಯವನ್ನು ಹರಿತಾಗಿ ಬಳಸುವದರ ಮೂಲಕ ವ್ಯಂಗ್ಯ ಪ್ರಬಂಧಗಳ ಚಕ್ರವರ್ತಿಯಾಗಿ ಹೆಸರು ಪಡೆದವರು. ಸರಳತೆಯೂ ಇದೆ. ಖಚಿತತೆಯು ಇದೆ. ಹೇಳಬೇಕಾದದ್ದು ಅಚ್ಚುಕಟ್ಟಾಗಿ ಹೇಳುವ ರೀತಿ ಅನನ್ಯವಾದದ್ದು. ಇದೇ ದಾರಿಯಲ್ಲಿ ಹಿರಿಯ ಸಾಹಿತಿ ದೇ. ಜವರೇಗೌಡ ಹಾಗೂ ಡಿ.ಎಲ್. ನರಸಿಂಹಾಚಾರ್ಯ ಪ್ರಬಂಧಗಳು ಸೇರುತ್ತವೆ. ಗಟ್ಟಿಯಾದ ಗದ್ಯಶೈಲಿ ಇಲ್ಲಿ ಎದ್ದು ಕಾಣುವುದು.

'ನಮ್ಮ ಮನೆಯ ದೀಪ' ಪ್ರಬಂಧದ ಮೂಲಕ ಮನೆ ಮನೆ ಮನೆ ತಲುಪಿದ ಹಾ.ಮಾ. ನಾಯಕರು ಮಹಿಳಾಪರ ಚಿಂತನೆಯು ಚರ್ಚೆಗೆ ಬರುವುದು. ಈ ಪ್ರಬಂಧವು ಕೌಟುಂಬಿಕ ಬಂಧ

ಕಟ್ಟಿಕೊಡುವುದು. ಅವರ ಹದಿನೈದು ಅಂಕಣ ಬರಹದ ಸಂಕಲನಗಳಲ್ಲಿ ಸುಸಂಸ್ಕೃತ ವ್ಯಕ್ತಿತ್ವದ ಅನಾವರಣ ಕಾಣುವುದು. ಓದುಗರ ಮನ ಮುಟ್ಟುವಂತೆ ಅವರು ಬರೆದರು. ಬರದದ್ದೆಲ್ಲ ಭಾವ ತುಂಬಿದ ಬಂಡಿಯಂತೆ ಕಾಣುತ್ತವೆ. ಸಂಸ್ಕೃತಿಯ ಚಿಂತನೆ ಅವರ ಪ್ರಬಂಧಗಳಲ್ಲಿ ಕಾಣುವುದು. ಇದೇ ಸಾಲಿಗೆ ಎಸ್.ಎಸ್. ಒಡೆಯರವರು ಸೇರುವರು ಬಾಳ ಬದುಕಿನ ಚಿಂತನೆಗಳನ್ನು ಭಾವನಾತ್ಮಕವಾಗಿ ಚಿಂತಿಸಿದ್ದಾರೆ. ಡಾ. ಸಿ.ಪಿ.ಕೆಯವರು 'ಚಿಂತನ ಬಿಂದು' ಪ್ರಬಂಧ ಸಂಕಲನದಲ್ಲಿ ಭಾವನಾನುಭವ, ಜೀವನಾನುಭವವು ಅಡಕವಾಗಿದೆ. ಅಧ್ಯಯನ ಅನುಭವಗಳ ಫಲವಾದ ನೇರವಾದ ಆಲೋಚನೆಗಳು ಅಲ್ಲಿವೆ. ಪ್ರಭುಶಂಕರವರ 'ಜನಮನ' ಅಪರೂಪದ ಪ್ರಬಂಧ ಸಂಕಲ. ವ್ಯಕ್ತಿ ಚಿತ್ರಗಳ ಅಪರೂಪದ ಸಂಕಲನಕ್ಕೆ ಮತ್ತೊಂದು ಉತ್ತಮ ಉದಾಹರಣೆ 'ಬೆರಗು' ಶರಣರ ತತ್ವ ಆದರ್ಶಗಳನ್ನು ಇಣಿಕಿ ನೋಡುವ ಪ್ರಯತ್ನವಾಗಿದೆ. 'ಶ್ರೀದಾಸರು', 'ಎತ್ತಿಗೆ ಜ್ವರ ಎಮ್ಮೆಗೆ ಬರೆ' ಸಾಮಾಜಿಕ ಚಿಂತನೆಯೊಂದಿಗೆ, ಭಾವನಾತ್ಮಕ ಚಿಂತನೆಗಳು ಅದರಲ್ಲಿ ಅಡಕಗೊಂಡಿವೆ. ಈ ಸಾಲಿನಲ್ಲಿ ಮತ್ತೊಂದು ಹೆಸರು ಸಿಂತ್ರಿ ಸರೋಜನಿಯವರದು. ಸ್ವಾನುಭವದ ಭಾವನಾತ್ಮಕ ವಿಚಾರಗಳು ಅಲ್ಲಿ ಅಡಕವಾಗಿದೆ. ಇಷ್ಟೇ ಅಲ್ಲದೆ ಕೊಡಗಿನ ಗೌರಮ್ಮನವರು ಉತ್ತಮ ಭಾವನಾತ್ಮಕ ಚಿಂತನೆಯ ಪ್ರಬಂಧಗಳನ್ನು ರಚಿಸಿದ್ದಾರೆ.

ಈ ರೀತಿಯ ಪ್ರಬಂಧಕಾರರಲ್ಲಿ ಇನ್ನು ಅನೇಕರು ಎರಡನೆ ಹಂತದಲ್ಲಿ ಕೆಲವು ಪ್ರಬಂಧಗಳನ್ನು ರಚಿಸಿದ್ದಾರೆ. ಭಾವನಾತ್ಮಕ ಚಿಂತನೆಯನ್ನು ಸವಿಸ್ತಾರವಾಗಿ ಹರವಿದ್ದಾರೆ. ವಿನಾಯಕರ 'ದೆವ್ವ', 'ಭರತಖಂಡದ ಜೀವ ಜ್ಯೋತಿಷಿಗಳು', 'ಕನ್ನಡದ ಕಿಡಿಗಳು', ಮಹಿಳಾ ಪ್ರಬಂಧಕಾರರಲ್ಲಿ ಟಿ. ಸುನಂದಮ್ಮನವರು ತಮ್ಮ ಪ್ರಬಂಧಗಳಲ್ಲಿ ಮಹಿಳಾ ಬದುಕಿನ ಪದರುಗಳನ್ನು ವಿವರಿಸಿದ್ದಾರೆ. ಶ್ರೀಮತಿ ಸುನಂದಾ ಬೆಳಗಾಂವರ. 'ಮೊಸರು ಅವಲಕ್ಕಿ', ಎಂ.ಎಸ್. ಸುಂಕಾಪೂರರ 'ಮಾವ ಕೊಡಿಸಿದ ಕೋಟು' ಪ್ರಬಂಧಗಳು ಭಾವನಾತ್ಮ ಚಿಂತನೆಯ ಫಲಗಳಾಗಿವೆ. 'ಮೊಸರು ಅವಲಕ್ಕಿ' ಮನೆಗೆ ಬರುವ ಅತಿಥಿಯ ಆತ್ಮಾನುಸಂಧಾನದ ನೆಲೆಗಳನ್ನು ಪರಿಚಯಿಸಿದರೆ, 'ಮಾವ ಕೊಡಿಸಿದ ಕೋಟು' ಕುಟುಂಬ ಸಂಬಂಧಗಳು ಅನಾವರಣವಾಗಿದೆ. ಮಾವನು ಮದುವೆಯಲ್ಲಿ ಕೊಡಿಸಿದ ಒಂದು ಕೋಟು ಜೀವನಪರ್ಯಂತ ಭಾವನಾಲಹರಿಯನ್ನು ನೇಯುತ್ತಾ ಹೋಗುವುದು. ಅದೇ ದಾಟಿಯಲ್ಲಿರುವ 'ಕುಡುಕ ಕರಿಯಪ್ಪ' ಪ್ರಬಂಧವು ಕುಡುಕ ಮನಸ್ಸಿನ ಸ್ವಚ್ಛಂದಲಹರಿಯ ಭಾವನಾತ್ಮಕಾವಾಗಿ ವಿವರಿಸುತ್ತಾ ಹೋಗುವುದು. ಅದೇ ರೀತಿಯಾಗಿ ಪಾಟೀಲ ಪುಟ್ಟಪ್ಪನವರ 'ಸ್ವದೇಶಿ ವಿದೇಶಿ' ಹಾಗೂ 'ಆದರ್ಶವಿಲ್ಲದಿದ್ದರೆ ಜೀವನವಿಲ್ಲ'. ಈ ಎರಡು ಪ್ರಬಂಧಗಳು ಭಾವನೆಗಳನ್ನು ಹೆಕ್ಕಿ ತೆಗೆದ ಪ್ರಬಂಧಗಳಾಗಿವೆ. ಈ ಸಾಲಿನಲ್ಲಿರುವ ಮತ್ತೊಬ್ಬರು ಪ್ರಬಂಧಕಾರರೆಂದರೆ, ವೀರೇಂದ್ರ ಸಿಂಪಿಯವರು ಹಾಗೂ ಮಲ್ಲಿಕಾರ್ಜುನ ಹುಲಗಬಾಳರು ಪ್ರಮುಖರು. ವೀರೇಂದ್ರ ಸಿಂಪಿಯವರ 'ಸ್ವಚ್ಛಂದ ಮನದ ಸುಳಿದಾಟ', 'ಕಾಗದದ ಚೂರು', 'ಭಾವ ಮೈದುನ' ಪ್ರಬಂಧ ಸಂಕಲನಗಳು ಭಾವನೆಯೊಂದಿಗೆ ಬೆಸೆದ ಬಂಧಗಳಾಗಿವೆ. ಅದರಲ್ಲೂ ಈ ಮೂರು ಪ್ರಬಂಧಗಳು ಭಾವ ಮನುಷ್ಯ ಸಂಬಂಧಗಳನ್ನು ಬೆಸೆದ ಬಂಧವಿದೆ. ಅದೇ ರೀತಿಯಾಗಿ ಪ್ರೊ. ಮಲ್ಲಿಕಾರ್ಜುನ ಹುಲಗಬಾಳರ 'ನಾಲಿಗೆಯ ಮೇಲೊಂದಿಷ್ಟು' 'ನಗೆ ಮುಗುಳು' ಪ್ರಬಂಧಗಳು ಹೃದಯವನ್ನು ಸೆಳೆದಿವೆ. 'ನ್ಯಾಯ ನಿಷ್ಠುರತೆ', 'ನಿತ್ಯ ಜೀವನ ಸತ್ಯ', ಹೃದಯ ಭಾರವನ್ನು ಹಗುರವಾಗಿಸುವ ಬರಹಗಾರರೆಂದು ಶ್ರೀಯುತರು ಹೆಸರು ಪಡೆದವರು.

**ಮೂರನೇ ಘಟ್ಟ**

ಹೊಸ ತಲೆಮಾರಿನ ಪ್ರಬಂಧಕಾರರು ಈ ಘಟ್ಟದಲ್ಲಿ ಗಮನಿಸಬಹುದು. ಈ ಕಾಲಘಟ್ಟದಲ್ಲಿ, ಸ್ವಚ್ಛಂದತೆ, ಸಂಕ್ಷಿಪ್ತತೆ, ವ್ಯಕ್ತಿ ನಿಷ್ಠತೆ, ಆತ್ಮೀಯತೆ, ಸರಸ ಸಾಹಿತ್ಯ, ತಿಳಿಹಾಸ್ಯ, ಭಾವನಾತ್ಮಕ ಚಿಂತನೆಗಳು, ವಾದ ವೈಖರಿಯ ಕಲ್ಪನಾ ವಿಲಾಸದ ಚರ್ಚೆ, ಜೀವನ ಪ್ರೀತಿ, ಜೀವನ ವಿಮರ್ಶೆ, ವಿಷಯ ವ್ಯಾಪ್ತಿ ಚಿಂತನೆ, ಲೇಖನ ಪ್ರಾರಂಭ ಮತ್ತು ಮುಕ್ತಾಯವನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಹಲವಾರು ಪ್ರಬಂಧಕಾರರು ಪ್ರಬಂಧ ರಚಿಸಿದ್ದಾರೆ. ಭಾವನಾತ್ಮಕ ಎಳೆಯನ್ನು ಇಟ್ಟುಕೊಂಡು ಕೃತಿ ರಚಿಸಿದ್ದಾರೆ.

ಈ ದಿಶೆಯಲ್ಲಿ ಸುನಂದಾ ಬೆಳಗಾವಕರ 'ಕಜ್ಜಾಯ' ಒಂದು ರಸವತ್ತಾದ ಚಿತ್ರಣ. ಜೀವನಾನುಭವ ಜೀವನದುದ್ದಕ್ಕೂ ನೆನಪಿನ ಬುತ್ತಿಯನ್ನು ಭಾವನಾತ್ಮಕವಾಗಿ ಬಿಚ್ಚುತ್ತಾ ಹೋಗುವರು. ರಸಾನುಭವದ ಚಿತ್ರಣವು ಇಲ್ಲಿ ಭಾವನಾತ್ಮಕವಾಗಿದೆ. ಮುಪ್ಪು, ವಯಸ್ಸು, ಬಾಲ್ಯವನ್ನು ಭಾವನಾತ್ಮಕವಾಗಿ ಚಿತ್ರಿಸಿದ್ದಾರೆ. ಇದರ ದಿಶೆಯಲ್ಲಿ 'ಮೊಸರು ಅವಲಕ್ಕಿ' ಮರಳಿ ಹೇಳಬೇಕಿಲ್ಲ. ಈ ಕಾಲಘಟ್ಟದಲ್ಲಿ ಬರುವ ಪ್ರಬಂಧಕಾರರಲ್ಲಿ ಎಂ.ಎಸ್. ಕೃಷ್ಣಮೂರ್ತಿ, ಎ.ಎಸ್. ವೇಣುಗೋಪಾಲರಾವ ಅವರ 'ಹಾದಿಪುರಾಣ', 'ಆತ್ಮೀಯ', ಪ್ರಬಂಧ ಸಂಕಲನಗಳಲ್ಲಿ ಸ್ವಚ್ಛಂಧ ಭಾವನಾ ಲಹರಿಯಿದೆ. ಜೀವನದ ಸ್ವಾರಸ್ಯಕರ ಅನುಭವಗಳು, ಗಾದೆಗಳು, ಹೇರಳವಾಗಿ ಬಳಕೆಯಾಗಿವೆ. ಶಂ.ಗು. ಬಿರಾದಾರ 'ಗಿಡ್ಡ ಹೆಂಡತಿ ಲೇಸು' ಪ್ರಬಂಧದಲ್ಲಿ ಸಾಮಾಜಿಕ, ರಾಜಕೀಯ ವಿಡಂಬನೆಗಳು ಭಾವನಾತ್ಮಕವಾಗಿ ಮೂಡಿಬಂದಿವೆ. ಅನಂತ ಕಲ್ಲೋಳಕರರ 'ವೈಬೋಗದ ವೈಖರಿಯಲ್ಲಿ' ಕೂತುಹಲಕಾರಿ ಭಾವನಾತ್ಮಕ ಚಿಂತನೆಗಳು ಇವೆ. ಶಾಸ್ತ್ರ ಸಾಹಿತ್ಯರಾದ ಟಿ.ವ್ಹಿ. ವೆಂಕಟಾಚಲಶಾಸ್ತ್ರಿಯವರು 'ಸದ್ದೆಂತೆಂಬರ ಗಂಡ' ಸಾಮಾನ್ಯ ವಿಷಯವನ್ನು ಪಾಂಡಿತ್ಯ ಪೂರ್ಣ ಭಾಷೆಯಲ್ಲಿ ಭಾವನಾತ್ಮಕವಾಗಿ ವಿಶ್ಲೇಷಣೆಯನ್ನು ಮಾಡಿದ್ದಾರೆ. ದೇ.ನಾ.ಶ್ರೀಯವರ 'ಗಿರಿಕಂದರ ಮೋಹಿತರಲ್ಲಿ' ಪ್ರವಾಸ ಅನುಭವವನ್ನು ಪ್ರಬಂಧಕ್ಕೆ ತಿರುಗಿಸಿದ್ದಾರೆ. ಜಿ.ಡಿ. ನಾಡಕರ್ಣಿ ಅವರು ತಮ್ಮ 'ಹಾಸ್ಯದ ಲಾಸ್ಯ'ದಲ್ಲಿ ರಸಪೂರ್ಣ ಬಣ್ಣನೆಯನ್ನು ತಮ್ಮ ಪ್ರಬಂಧಗಳಲ್ಲಿ ಭಾವನಾತ್ಮಕವಾಗಿ ವಿಶ್ಲೇಷಣೆ ಮಾಡಿದ್ದಾರೆ. ಜಿ.ಶಂ. ಪರಮಶಿವಯ್ಯನವರು ಜಾನಪದ ಸನ್ನಿವೇಶಗಳನ್ನು ಪ್ರಬಂಧಗಳಲ್ಲಿ ಹೆಣದಿದ್ದಾರೆ. ಡಿ.ಕೆ. ರಾಜೇಂದ್ರರು ಹರಟೆಯ ಮಲ್ಲರು ಎಂಬುದರಲ್ಲಿ ಎರಡು ಮಾತಿಲ್ಲ. ತಮ್ಮ ಬಾಲ್ಯವನ್ನು ಚಿತ್ರಿಸುವದರೊಂದಿಗೆ ಜನಪದ ಗೀತೆಗಳನ್ನು ಹದವರಿತು ಭಾವನಾತ್ಮಕವಾಗಿ ಜೋಡಿದ್ದಾರೆ. 'ಮುಗಿಲು ಹಳ್ಳಿಯ ಬಖೈರು ಹಾಗೂ ಇತರ ಲೇಖನಗಳು', ಪ್ರಬಂಧದಲ್ಲಿ ಹಳಗನ್ನಡ ಹಾಗೂ ಉರ್ದು ಮಿಶ್ರಿತ ಕನ್ನಡ ಶೈಲಿಯಿಂದ ಹೊಸ ಪ್ರಪಂಚವೊಂದನ್ನು ಸೃಷ್ಟಿಸಿದ್ದಾರೆ.

ಈ ಕಾಲದ ಪ್ರಮುಖ ಲೇಖಕಿಯಾದ ಗುರುದೇವಿ ಹುಲೆಪ್ಪನವರು 'ನನ್ನಜ್ಜಿಗುಜ್ಜಿ', 'ಬಿಡುಗಡೆಯ ಸಡಗರ', 'ಮೂಗು ಮುರಿಯುವವರು', 'ನೀರು ಬಂತು ನೀರು', ಪ್ರಬಂಧಗಳು ಭಾವನಾ ಪ್ರಪಂಚವನ್ನು ವಿಸ್ತರಿಸುತ್ತಾ ಹೋಗುವವು. ತಮ್ಮದೆ ಪುಸ್ತಕ ಬಿಡುಗಡೆ ಸಮಾರಂಭ ಅನುಭವವನ್ನು ತುಂಬಾ ಭಾವನಾತ್ಮಕವಾಗಿ ಚಿತ್ರಿಸಿದ್ದಾರೆ. ತುಂಬಾ ತೊಂದರೆ ತಾಪತ್ರಯ ತೆಗೆದುಕೊಂಡು ಬಿಡುಗಡೆ ಮಾಡಿದ ಪುಸ್ತಕ ಸಮಾರಂಭ ಮುಗಿಯುವದರೊಳಗೆ ಕಿರಾಣಿ ಅಂಗಡಿಯ ರದ್ದಿಯಾಗಿರುವ ಪ್ರಸಂಗವಂತು ತುಂಬಾನೆ ಭಾವನಾತ್ಮಕವಾಗಿ ಮೂಡಿಬಂದಿದೆ. ಅದೆ ಸಂದರ್ಭಗಳನ್ನು 'ನನ್ನಜ್ಜಿಗುಜ್ಜಿ' ಪ್ರಬಂಧಗಳಲ್ಲಿ ಮೂಡಿಬಂದಿವೆ. ಭಾವನೆಯ ಕಲ್ಪನಾಲಹರಿ ಭಾವನಾತ್ಮಕ ಚಿಂತನೆಗಳು ಇವರ ಪ್ರಬಂಧದಲ್ಲಿ

ಹಾಸುಹೊಕ್ಕಾಗಿವೆ. ಈ ದಿಶೆಯಲ್ಲಿ ಅನಸೂಯಾ ಸಿದ್ದರಾವರು, ಆರ್. ನಿರ್ಮಲಾ ಅವರ ಪ್ರಬಂಧದಲ್ಲಿ ಭಾವನಾತ್ಮಕ ಚಿಂತನೆಗಳು ಚಿತ್ರಿತವಾಗಿವೆ. ಲಂಕೇಶರ ಟಿಕೆ ಟಿಪ್ಪಣಿ ಉತ್ತಮ ಪ್ರಬಂಧದ ದಾಟಿಯನ್ನು ಹೊಂದಿವೆ. ಇವುಗಳಲ್ಲಿ ಹಲವಾರು ಲಲಿತ ಪ್ರಬಂಧದ ಗುಣಗಳಿರುವುದು ಉಂಟು. ಅವರು ಭಾವನಾತ್ಮಕ ಚಿಂತನೆಗಳು ಇಲ್ಲಿ ಎದ್ದು ಕಾಣುವವು. ಗಾಢ ವೈಚಾರಿಕತೆಯನ್ನು ಭಾವನಾತ್ಮಕವಾಗಿ ಚಿತ್ರಿಸಿದ್ದಾರೆ. ಇಂತಹ ಲಕ್ಷಣಗಳು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯರು ಅವರ ಹಲವಾರು ಪ್ರವಾಸ ಕಥನ ಹಾಗೂ ಪರಿಸರ ಚಿಂತನೆಗಳಲ್ಲಿ ಹಲವಾರು ಅಂಶಗಳು ಬಂದರೂ ಕೂಡ ಪ್ರಬಂಧವೆಂದು ಪ್ರತ್ಯೇಕವಾಗಿ ರಚಿಸಿಲ್ಲ. ವೈಜ್ಞಾನಿಕ ಭಾವನಾತ್ಮಕ ಚಿಂತೆಗಳು ಇವೆ. ಈ ದಿಶೆಯಲ್ಲಿ ಕೀರ್ತಿನಾಥ ಕುರ್ತುಕೋಟಿಯವರ 'ಉರಿಯ ನಾಲಿಗೆ' ತುಂಬ ವೈಚಾರಿಕ ಹಾಗೂ ಭಾವನಾತ್ಮಕ ಚಿಂತನೆಗಳಿಂದ ಕೂಡಿವೆ.

ಚಂದ್ರಶೇಖರ ಆಲೂರರ 'ಆ ಕ್ಷಣದ ಸತ್ಯ' ಪ್ರಬಂಧ ಸಂಕಲನ ತುಂಬಾ ವೈಶಿಷ್ಟ್ಯ ಪೂರ್ಣವಾದದ್ದು. ಆ ಪ್ರಬಂಧದಲ್ಲಿ ಬರುವ 'ಒಂದು ಗ್ರಿಟಿಂಗ್ ಕಾರ್ಡ್‌ಗಾಗಿ' ಪ್ರಬಂಧವು ಮನುಷ್ಯನ ಭಾವನೆಗಳು ಹೇಗೆಲ್ಲಾ ವರ್ತಿಸುತ್ತವೆ ಎಂಬ ಸಂಗತಿಯನ್ನು 'ಒಂದು ಗ್ರಿಟಿಂಗ್ ಕಾರ್ಡ್' ಹಿನ್ನಲೆಯಲ್ಲಿ ತುಂಬಾ ಅರ್ಥವತ್ತಾಗಿ ಚಿತ್ರಿಸಿದ್ದಾರೆ. ಕೆ. ಸತ್ಯನಾರಾಯಣರ 'ನಮ್ಮ ಪ್ರೀತಿಯ ಕ್ರಿಕೆಟ್' 'ಶಾಲೆಯ ಗಂಟೆ' ಪ್ರಬಂಧಗಳಲ್ಲಿ ಮಕ್ಕಳ ಭಾವನಾತ್ಮಕ ಚಿಂತನೆಗಳು ಒಡಮೂಡಿವೆ. ಭಾವ ಪ್ರಧಾನವಾದ ಚಿಂತನೆಗಳನ್ನು ಇಲ್ಲಿ ಮೆಲಕು ಹಾಕಲಾಗಿದೆ. ಈ ದಿಶೆಯಲ್ಲಿ ಸಿದ್ದರಾಮ ಹೊನಕಲ್ಲರ ಪ್ರಬಂಧಗಳು ಸಾಹಿತ್ಯಿಕ ಚಿಂತನೆಯೊಂದಿಗೆ ಭಾವನಾತ್ಮಕವಾಗಿ ಮೂಡಿ ಬಂದಿದ್ದು ಇದೆ.

ಈರಪ್ಪ ಕಂಬಳಿಯವರ 'ಹೀಗೊಂದು ಟಾಪ್ ಪ್ರಯಾಣ' ತುಂಬಾ ಮಹತ್ವ ಪ್ರಬಂಧಗಳಲ್ಲೊಂದು. 'ಮಸಾಲೆಗೆ ಹೋದ ಮಾನ', 'ಕಿರುಕುಳ ರಜಾ', 'ಉಂಡಿ ಕದ್ದವರು', 'ನಾನು ಕವನ ಬರೆದೆ', 'ಗಣಿತ ಸಂಗೀತ', ಶುನಕೋ ಪಾಖ್ಯಾನ', 'ಆಯುಷ್ಕರ್ಮ ಶಾಲೆಯಲ್ಲಿ' ಮುಂತಾದ ಪ್ರಬಂಧಗಳಲ್ಲಿ ಜೀವನಾನುಬಂಧ, ರಸವತ್ತತೆ, ಭಾವನಾ ಲಹರಿಯು ಇಲ್ಲಿ ಚಿತ್ರಿತವಾಗಿದೆ. ಇಲ್ಲಿ ದಟ್ಟವಾದ ಭಾವನಾತ್ಮಕ ಚಿಂತನೆಗಳು ಮೂಡಿಬಂದಿವೆ. ಇದೇ ಸಾಲಿನಲ್ಲಿ ಜಯಶ್ರೀ ಹೆಗಡೆಯವರ 'ಇಣುಕಿದಲ್ಲಿ ಛಂದ', ಪ್ರಬಂಧವು ಕೂಡಾ ಮುಖ್ಯವಾದದ್ದು. 'ಚಂಡಾಳ ಚೌಕಳಿ', 'ಮನೆಯಿಂದ ಮನೆಗೆ', 'ಕಡಲಂಚಿನ ಕರಾವಳಿ', 'ಬಾರಲೆ ಹಕ್ಕಿ', 'ಗಾಳಿ ವರ್ತಮಾನ', ಪ್ರಬಂಧಗಳು ತುಂಬಾ ಭಾವನಾತ್ಮಕವಾಗಿ ಮೂಡಿಬಂದಿವೆ.

ನವ್ಯ ಸಾಹಿತ್ಯ ಕಾಲ ಹೊರತುಪಡಿಸಿ ಎಲ್ಲ ಕಾಲದಲ್ಲೂ ರಚನೆಗೊಂಡ ಪ್ರಬಂಧ ಸಾಹಿತ್ಯ ನಮ್ಮ ಹೊಸ ಲೇಖಕರು ಈ ಕಡೆ ದೃಷ್ಟಿ ಬೀರುತ್ತಿರುವುದು. ಅತ್ಯಂತ ಸಂತೋಷದಾಯಕವಾದ ಸಂಗತಿಯಾಗಿದೆ. ಲಲಿತ ಪ್ರಬಂಧ ಬರೆಯಲು ಲೇಖಕರು ಉತ್ಸಾಹ, ಅವುಗಳನ್ನು ಓದಬೇಕೆಂದು ಓದುಗರ ಲವಲವಿಕೆ ಇವೆರಡು ಸರಸವಾಗಿ ಸಮರಸವಾದರೆ ಸುರಸ ಲಲಿತಪ್ರಬಂಧಗಳ ಪುಸ್ತಕಗಳಿಗೆ ಯೋಗ್ಯ ಪ್ರೋತ್ಸಾಹನೆ ದೊರೆತಂತಾಗುತ್ತದೆ. ಪ್ರತಿದಿನವು ಈ ಬಾಳಿನಲ್ಲಿ ಉಂಡ ಸುಖದುಃಖದ ಅನುಭವಗಳನ್ನು ರಸಮಯವಾದ ಪ್ರಸಂಗಗಳನ್ನು ಚಿತ್ರಿಸುವ ಶಕ್ತಿ ಸಾಹಿತ್ಯದ ಒಂದು ರೂಪವೆ ಲಲಿತಪ್ರಬಂಧ ಪ್ರಕಾರವಾಗಿದೆ. ಕನ್ನಡದಲ್ಲಿ ಲಲಿತಪ್ರಬಂಧ ಪ್ರಭಾವ ಬಿರುವ ಶಕ್ತಿಯುಳ್ಳವುಗಳಾಗಿವೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ, ಈ ಸಾಹಿತ್ಯ ಪ್ರಕಾರ ಕೊರವಂಜಿ, ವಿನೋಧಿನಿ, ಕಂಠೀರವ, ಪ್ರಬುದ್ಧ ಕರ್ನಾಟಕ, ಶುಭೋದಯ, ಸಚಿತ್ರ ಭಾರತ, ವಿಶ್ವಕರ್ನಾಟಕ, ಮುಂತಾದ ಹಾಗೂ ಇಂದಿನ ಸುಧಾ, ತರಂಗ, ಮಯೂರ, ಕರ್ಮವೀರ, ತುಷಾರ, ಸಂಕ್ರಮಣ, ಕಸ್ತೂರಿ ಪತ್ರಿಕೆಗಳ ಸಹಕಾರದೊಂದಿಗೆ ದಿನಪತ್ರಿಕೆಗಳಾದ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ, ವಿಜಯ ಕರ್ನಾಟಕ, ವಿಜಯವಾಣಿ, ಹೊಸ ದಿಗಂತ, ವಿಶ್ವವಾಣಿ, ಮುಂತಾದ ಪತ್ರಿಕೆಗಳಲ್ಲಿ ಪ್ರಚಾರ ಪಡೆಯುತ್ತಿರುವುದು ಸಾಹಿತ್ಯ ಬೆಳವಣಿಗೆಗೆ ಪೂರಕ ವಾತಾವರಣ ಮೂಡುತ್ತಿರುವುದು ಅತ್ಯಂತ ಆಶಾದಾಯಕ ಸಂಗತಿಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಸಿದ್ದಲಿಂಗಯ್ಯ ಜಿ.ಎಸ್. ಮತ್ತು ಎಮ್.ಎಚ್.ಕೃಷ್ಣಯ್ಯ. (1990). ಸಾಲು ದೀಪಗಳು. ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.
- ಧಾರವಾಡಕರ ರಾ.ಯ. (1990). ಪ್ರಬಂಧ ಪ್ರಪಂಚ. (ಅಭಿನಂದನ ಗ್ರಂಥ). ಧಾರವಾಡ.
- ಮೂರ್ತಿ ರಾಮ್ ಎ.ಎನ್. (1989). ಸಮಗ್ರ ಲಲಿತ ಪ್ರಬಂಧಗಳು. ಕನ್ನಡ ಸಂಘ, ಕ್ರೈಸ್ಟ ಕಾಲೇಜು, ಬೆಂಗಳೂರು.
- ಮಳಗಿ ಜಿ.ವ್ಹಿ. ಮತ್ತು ಆರ್.ಬಿ. ಚಲಮಿ (2005). ಪ್ರಬಂಧ ಸಂಪದ. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ವೀರಣ್ಣ ರಾಜೂರು. ಮತ್ತು ಬಿ.ವ್ಹಿ. ಗುಂಜಟ್ಟಿ. (2003). ಪ್ರಬಂಧ ಸಂಚಯ. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ವಸಂತಕುಮಾರ ಮಳಲಿ. (1978). ಪ್ರಬಂಧ ಸಾಹಿತ್ಯ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ವರದರಾಜ ಹುಯಿಲಗೋಳ. (1961). ಕನ್ನಡ ಸಾಹಿತ್ಯದಲ್ಲಿ ಲಲಿತ ಪ್ರಬಂಧಗಳು. ಸಮಾಜ ಪುಸ್ತಕಾಲಯ, ಧಾರವಾಡ.